


# ದುಬಾರಿ ಪುಸ್ತಕ



ಪ್ರಂಪಂಚದಲ್ಲೆ ಅತೀ ದುಬಾರಿಯ ಪುಸ್ತಕವಿದು. ಜೇಮ್ಸ್ ಅಡೊಬನ್ಸ್‌ನ 'ಬರ್ಡ್ಸ್ ಆಫ್ ಅಮೇರಿಕಾ' ಎಂಬ ಈ ಪುಸ್ತಕ ಹೆಸರೇ ಹೇಳುವಂತೆ ಹಕ್ಕಿಗಳ ಕುರಿತಾದ ಚಿತ್ರಪುಸ್ತಕ. 1851ರಲ್ಲಿ ತೀರಿಕೊಂಡ ಜೇಮ್ಸ್ ಅಡೊಬನ್ಸ್, ವನ್ಯಜೀವಿಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ಅಪರೂಪದ ಅನ್ವೇಷಕ. ಈ ಪುಸ್ತಕದ 119 ಮೂಲ ಪ್ರತಿಗಳಷ್ಟೇ ಇವೆ. ಮೊದಲನೇ ಪ್ರತಿಯು 2000ರಲ್ಲಿ 8.8 ದಶಲಕ್ಷ ಡಾಲರ್‌ಗೆ ಮಾರಾಟವಾಗಿದ್ದರೆ, ಎರಡನೇ ಪ್ರತಿಯು 2010 ರಲ್ಲಿ 11 ದಶಲಕ್ಷ ಡಾಲರ್‌ಗೆ ಹರಾಜಿನಲ್ಲಿ ಮಾರಾಟವಾಗಿ ದಾಖಲೆ ನಿರ್ಮಿಸಿದೆ.

ಚಿತ್ರಗಳ ಎಲ್ಲ ಸೂಕ್ಷ್ಮತೆಗಳನ್ನೂ ವಿವರವಾಗಿ ತೋರಿಸುವಂತೆ, ಅತ್ಯಂತ ನಾಜೂಕಿನಿಂದ ಕೈಯಿಂದಲೇ ಬಣ್ಣ ಮಾಡಿರುವ ಪ್ರತಿಯೊಂದೂ ಮೂಲ ಪ್ರತಿಯಲ್ಲಿ, ಸುಮಾರು 500 ತಳಿಗಳ, 1000 ಪಕ್ಷಿಗಳ ಚಿತ್ರಗಳಿವೆ. ಈ ಪುಸ್ತಕವು 3– 2 ಅಡಿಗಳಷ್ಟು ದೊಡ್ಡದಿದೆ. ಯಾಕೆಂದರೆ ಜೇಮ್ಸ್ ಅಡೊಬನ್ಸ್, ಪ್ರತಿಯೊಂದು ಪಕ್ಷಿಗಳನ್ನೂ ಅವುಗಳಿರುವ ಗಾತ್ರದಷ್ಟೇ ಚಿತ್ರಿಸಬೇಕೆಂದು ಬಯಸಿದ್ದನಂತೆ.

■ ವಿದ್ಯಾ ಹಾಲಬಾವಿ